ಶ್ರೀ ಡಿ. ದೇವರಾಜ ಅರಸ್.—ಅದನ್ನು ಗಮನಿಸೋಣ. ಗೊಬ್ಬರ ತಯಾರು ಮಾಡುವವರು ಅವರ ಏಜೆಂಟರ ಮೂಲಕ ಕೊಡುವರು. ಸಾಕಷ್ಟು ಗೊಬ್ಬರ ನಮ್ಮ ಹತ್ತಿರವಿಲ್ಲ. ಈಗ ವಿಶೇಷ ಪರಿಸ್ಥಿತಿ ಇದೆ. ಮಾನ್ಯ ಸದಸ್ಯರು ಹೇಳುವುದನ್ನು ಗಮನಿಸಿ ಹಾಸನಕ್ಕೆ ಒದಗಿಸಲು ಪ್ರಯತ್ನ ಮಾಡೋಣ.

ಶ್ರೀ ಕೆ. ಎಫ್. ಪಾಟೀಲ್.—ಗೊಬ್ಬರ ತಯಾರಿಸುವ ಕಾರ್ಖಾನೆಗಳನ್ನೇಕೆ ರಾಷ್ಟ್ರೀಕರಣ ಮಾಡಬಾದರು ?

ಶ್ರೀ ಡಿ. ದೇವರಾಜ ಅರಸ್.—ಮಂಗಳೂರಿನಲ್ಲಿ ಈಗ ನಮ್ಮದೇ ಕಾರ್ಖಾನೆ ಸ್ಥಾಪನೆಯಾಗಿದೆ, ಅಲ್ಲಿ ತೀವ್ರವಾಗಿ ತಯಾರಿಸಲು ನೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದೆ. ರಾಷ್ಟ್ರೀಕರಣ ಮಾಡುವ ವಿಚಾರ ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟಿದೆ, ನಮಗೆ ಅದು ಸೇರಿಲ್ಲ.

Notice of privilege Motion *Re.* purchase of Begum Mahal by the Bangalore City Corporation

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸಿಪುರ).—ನಾನು ಒಂದು ಪ್ರಿವಿಲೇಜ್ ಮೋಷನ್ ಕಳಿಸಿದ್ದೆ. ಅವಕಾಶ ಕೊಟ್ಟರೆ ಅದರ ವಿಚಾರವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು.—ತಾವು ಕೊಟ್ಟಿರುವುದನ್ನು ನಾನು ನೋಡಿ ಮಂತ್ರಿಗಳಿಗೆ ಕಳುಹಿಸಿದ್ದೇನೆ. ಏನಾದರೂ ಹೇಳಬೇಕಾದರೆ ಹೇಳಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಬೇಗಂ ಮಹಲ್ ಕೊಳ್ಳುವ ವಿಚಾರ ಪ್ರಸ್ತಾಪ ಬಂದಾಗ ಉತ್ತರ ಕೊಡುವಾಗ ಮಂತ್ರಿಗಳು ಆ ವಿಚಾರದಲ್ಲಿ ಕಾರ್ಪೊರೇಷನ್ನಿನಲ್ಲಿ ನಿರ್ಣಯವಾಗಿಲ್ಲ ಎಂದು ಹೇಳಿದರು. ಆದರೆ 19-6-72 ರಲ್ಲಿ ಕಾರ್ಪೊರೇಷನ್ನಿನಲ್ಲಿ ನಿರ್ಣಯವಾಗಿದೆ. 12,13,591 ರೂಪಾಯಿಗಳಿಗೆ ಕೊಳ್ಳಲು ತೀರ್ಮಾನವಾಗಿದೆ. ಮಂತ್ರಿಗಳು ಉತ್ತರ ಕೊಡುವಾಗ ಕಾರ್ಪೊರೇಷನ್ನಿನಲ್ಲಿ ನಿರ್ಣಯವಾಗಿಲ್ಲ, ಚರ್ಚೆಯಾಗಿ ಕೈಬಿಟ್ಟರು ಎಂದು ಹೇಳಿದರು. ನನಗೆ ಗೊತ್ತಿರುವ ರೀತಿಯಲ್ಲಿ ಆ ರೀತಿ ಹೇಳಿದ್ದು ಜ್ಞಾಪಕವಿದೆ. ಅವರು ಈ ಸಭೆಗೆ ತಪ್ಪು ವಿವರಣೆ ಕೊಟ್ಟು ಅಪಘಾತಮಾಡಿದ್ದಾರೆ ಎಂದು ಹೇಳಿದರೆ ಬಹುಶಃ ಅದು ತಪ್ಪಲ್ಲ. ಮಂತ್ರಿಗಳಾಗಿರುವವರು ಈ ಸಭೆಯಲ್ಲಿ ಯಾವುದೇ ಹೇಳಿಕೆ ಕೊಡುವಾಗ ಸತ್ಯಕ್ಕೆ ದೂರವಾದ ಹೇಳಿಕೆ ಕೊಡುವುದು ಸರಿಯಲ್ಲ. ಹಾಗೆ ಮಾಡುವುದು ಸಭಾ ನಿಯಮಗಳಿಗೆ ತಕ್ಕುದಲ್ಲ. ಒಂದು ವೇಳೆ ಅವರ ಹತ್ತಿರ ಪೂರ್ಣವಾದ ಮಾಹಿತಿ ಇಲ್ಲದಿದ್ದರೆ ಅದನ್ನು ತರಿಸಿಕೊಂಡು ಸರಿಯಾದ ಹೇಳಿಕೆ ಕೊಡಬಹುದಾಗಿತ್ತು. ಅವರು ಎಲ್ಲಾ ವಿಷಯ ಗೊತ್ತಿರುವ ಹಾಗೆ ಹೇಳುತ್ತಿದ್ದರು. ನಿಜವಾಗಿಯೂ ಹೇಳಬೇಕಾದರೆ ಕಾರ್ಪೊರೇಷನ್‌ನಲ್ಲಿ ನಿರ್ಣಯವಾಗಿಲ್ಲ, ಮಂತ್ರಿಗಳು ಹೇಳಿರುವುದು ಸತ್ಯಕ್ಕೆ ದೂರವಾದ ವಿಷಯ. ಈ ಸಭೆಯನ್ನು ಅವರು ನಿರ್ಲಕ್ಷಮಾಡಿದ್ದಾರೆಂದರೆ ಅದು ತಪ್ಪಲ್ಲ. ಈ ಸಭೆ ಏನು ಮಾಡುವುದು, ತಪ್ಪು ಹೇಳಿದರೂ ಪರವಾಗಿಲ್ಲ ಎಂದು ಅವರು ತಿಳಿದಿರಬಹುದು. ಆ ಧಾಟಿಯಲ್ಲಿ ಅವರು ಹೇಳಿದ್ದಾರೆ. ಈ ದಿವಸ ನಾನು ನಿರ್ಣಯದ ಕಾಪಿ ಕೊಟ್ಟಿದ್ದೇನೆ. ನಾನು ಸೃಷ್ಟಿಮಾಡಿ ಹೇಳುತ್ತಿಲ್ಲ, ಸರಕಾರಕ್ಕೆ ನಿರ್ಣಯದ ಕಾಪಿ ಕೊಟ್ಟಿದ್ದೇನೆ. ಈ ದಿನ ಈ ಸಭೆಯನ್ನು ನಿರ್ಲಕ್ಷಮಾಡಿ ನಿಯಮಗಳಿಗೆ ವಿರುದ್ಧವಾಗಿ ಸಭೆಯಮುಂದೆ ಹೇಳಿಕೆಕೊಟ್ಟಿದ್ದಾರೆ. ಇದು ಬಹುಶಃ ಈ ಸಭೆಯ ನಿಯಮಾವಳಿ ಏನಿದೆ ಅದಕ್ಕೆ ತದ್ವಿರುದ್ಧವಾಗಿದೆ. ಆದುದರಿಂದ ಅವರು ಹಕ್ಕುಬಾಧ್ಯತೆಯ ಉಲ್ಲಂಘನೆ ಮಾಡಿದ್ದಾರೆ ಎಂಬುದು ನನ್ನ ನಿಷ್ಪಷ್ಟ ಅಭಿಪ್ರಾಯ. ಅವರು ಸುಳ್ಳು ಹೇಳಿದರು ಎಂದರೆ ತಪ್ಪಾಗಬಹುದು, ಫಾಲ್ಸ್ ಸ್ಟೇಟ್‌ಮೆಂಟ್ ಅಥವಾ ಇನ್‌ಕರೆಕ್ಟ್ ಸ್ಟೇಟ್‌ಮೆಂಟ್ ಮಾಡಿದರು ಎಂದು ಹೇಳಬಹುದೆಂದು ಕಾಣುತ್ತದೆ. ಫಾಲ್ಸ್ ಸ್ಟೇಟ್‌ಮೆಂಟ್ ಎಂದು ಹೇಳಿದರೆ ಫೋರ್ಸ್ ಜಾಸ್ತಿ ಇರುವುದೆಂದು ತೋರುವುದು.

(ವಾಟಾಳ್ ನಾಗರಾಜ್‌ರವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು.—ಶ್ರೀ ವಾಟಾಳ್ ನಾಗರಾಜರವರು ಕೂತುಕೊಳ್ಳಬೇಕು. ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳುವ ಮೊದಲು ಪರ್ಮಿಷನ್ ತೆಗೆದುಕೊಳ್ಳಬೇಕೆಂದು ಶ್ರೀ ದೇವೇಗೌಡರು ಕೆಲವು ವಿಷಯಗಳನ್ನು ಹೇಳುತ್ತಿದ್ದಾರೆ. ಅದಕ್ಕೂ ಮುಂಚೆಯೇ ನೀವು ಮಾತನಾಡುತ್ತೇನೆ ಎಂದು ಹೇಳಿದರೆ ಹೇಗೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ನಾನು ಇದರಲ್ಲಿ ಕೊಂಚ ಹೇಳ ಬೇಕಾಗುತ್ತದೆ. ನೀವು ನನ್ನ ಬಾಯನ್ನು ಕಟ್ಟಿ ಹಾಕಿದರೆ ಹೇಗೆ ?

ಅಧ್ಯಕ್ಷರು.—ಅವರು ಪರ್ಮಿಷನ್ ಕೇಳುತ್ತಿದ್ದಾರೆ. ತಾವು ಮಧ್ಯೆ ಎದ್ದು ಬಿಟ್ಟರೆ ಹೇಗೆ ?

Sri D. DEVARAJ URS (Chief Minister).—The Hon. Member Sri Deve Gowda is free to express whatever he wants to say. I will not come in his way. ''ಸುಳ್ಳು'' ಎನ್ನುವುದು ಅನ್‌ಪಾರ್ಲಿಮೆಂಟರಿ ಎಂಬುದಾಗಿ ಪ್ರತೀತಿ ಬಂದಿದೆ. ಅದಕ್ಕೋಸ್ಕರ ಆ ಪದವನ್ನು ''ಅನ್‌ಕರೆಕ್ಟ್'' ಎಂದು ಹೇಳುತ್ತೇನೆ. ''ಸುಳ್ಳು'' ಎಂದು ಆ ಪದವನ್ನು ಉಪಯೋಗಿಸುವುದಿಲ್ಲ, ''ನಿಜವಲ್ಲ'' ಎಂದು ಹೇಳುತ್ತೇವೆ. ತಾವು ಸುಳ್ಳು ಎಂದು ಹೇಳಬೇಕೆಂದರೆ ನನ್ನ ಅಭ್ಯಂತರವಿಲ್ಲ. Whether it is parliamentary or not is left to the discretion of the Chair. But previously it has been held that it is unparliamentary.

ಅಧ್ಯಕ್ಷರು.—''ಅನ್‌ಕರೆಕ್ಟ್'' ಎಂದು ಹೇಳಿದರೂ ಸರಿ.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯ ಹಕ್ಕು ಬಾಧ್ಯತೆಗೆ ಚ್ಯುತಿ ತಂದಿದೆ. ಪ್ರಿವಿಲೇಜ್ ಮೋಷನ್‌ಗೆ ದಯವಿಟ್ಟು ತಾವು ಅನುಮತಿಕೊಡಬೇಕು. ಇದರ ಚರ್ಚೆ ಆಗಬೇಕಾಗಿದೆ. ಮಂತ್ರಿಗಳು ಏನು ಹೇಳುತ್ತಾರೆ ಅದು ನತ್ಯಕ್ಕೆ ದೂರವಾಗಿರುವುದರಿಂದ ತಾವು ಇದಕ್ಕೆ ಒಪ್ಪಿಗೆಯನ್ನು ಕೊಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಶಾಖೆಯ ಮಂತ್ರಿಗಳು).—ಮಾನ್ಯ ಸಭೆಯೊಳಗೆ ಶ್ರೀಮಾನ್ ದೇವೇಗೌಡರು ಬೇಗಂ ಮಹಲ್ ಅಕ್ವೈರ್ ಮಾಡುವ ವಿಚಾರದಲ್ಲಿ ಒಂದು ಪ್ರಶ್ನೆಯನ್ನು ಎತ್ತಿದರು. ಈ ಪ್ರಶ್ನೆ ಬಗ್ಗೆ ವಿವರಣೆಯನ್ನು ಕೇಳಿದಾಗ ನಾನು ಹೇಳಿದೆ ನನಗೆ ಇನ್‌ಫರ್ ಮೇಷನ್ ಬಂದಿರುವ ಪ್ರಕಾರ ಅಕ್ವಿಜಿಷನ್ ಮಾಡತಕ್ಕ ವಿಷಯ ಕೈ ಬಿಡಬೇಕೆಂದು ತೀರ್ಮಾನ ವಾಯಿತು ಎಂದು ತಾವು ಮಾನ್ಯ ಸಭೆಯನ್ನು ತಪ್ಪು ದಾರಿಗೆ ಎಳೆಯುತ್ತಿದ್ದೀರಿ ಮತ್ತು ನತ್ಯಕ್ಕೆ ದೂರವಾದ ವಿಷಯವನ್ನು ಹೇಳುವುದಕ್ಕೆ ನನಗೆ ಇಚ್ಛೆ ಇಲ್ಲ. ಮಾನ್ಯ ನದಸ್ಯರು ಯಾರೂ ಆ ರೀತಿ ಮಾಡಕೂಡದು, ನಾನೂ ಕೂಡ ಮಾಡುವುದಿಲ್ಲ ಎಂದು ಹೇಳುತ್ತೇನೆ. ನನ್ನಲ್ಲಿ ಇರತಕ್ಕ ಒಂದು ಇನ್‌ಫರ್‌ಮೇಷನ್ ಪ್ರಕಾರ ನಾನು ಏನು ಹೇಳಿದೆ ಅದು ನಿಜ. ಹಾಗೂ ದೇವೇಗೌಡರು ಹೇಳಿದ್ದು ನಿಜ. ಟ್ಯಾಕ್ಸೇಷನ್ ಮತ್ತು ಫೈನಾನ್ಸ್ ಕಮಿಟಿಯವರು ಅದನ್ನು ಕೈ ಬಿಟ್ಟಿದ್ದಾರೆ. ಕೈ ಬಿಟ್ಟ ಇನ್‌ಫರ್‌ಮೇಷನ್‌ನನ್ನು ಮಾನ್ಯ ಮೇಯರ್‌ರವರು ಕಾರ್ಪೊರೇಷನ್ ಮುಂದೆ ತರಬೇಕು ಎಂದು ಆರ್ಡರ್ ಮಾಡಿ ಅದನ್ನು ಹಿಂದಿನ ಕಾರ್ಪೊರೇಷನ್ ಮೀಟಿಂಗ್‌ನಲ್ಲಿ ಅಕ್ವೈರ್ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ (ಕೋಲಾರ).—ಟೇಪ್ ರಿಕಾರ್ಡ್ ರೆಫರ್ ಮಾಡಿದರೆ ಆ ವಿಷಯ ಆಗಲೆಲ್ಲ ಎಂದು ಗೊತ್ತಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಕಾರ್ಪೊರೇಟರ್ ಈ ವಿಷಯ ಆಗಲೆಲ್ಲ ಎಂದು ಹೇಳುತ್ತಾರೆ. ಆದುದರಿಂದ ನನಗೆ ಅನಿಸುತ್ತದೆ ಟ್ಯಾಕ್ಸೇಷನ್ ಮತ್ತು ಫೈನಾನ್ಸ್ ಕಮಿಟಿ ಮುಂದಿರುವ ನಿರ್ಣಯದಿಂದ ಮತ್ತು ಕಾರ್ಪೊರೇಷನ್ ಮಾಡಿರುವ ನಿರ್ಣಯದಿಂದ ಎಲ್ಲವೂ ಕನ್‌ಫ್ಯೂಜ್ ಆಗಿರುವುದರಿಂದ ಮಾನ್ಯ ನದಸ್ಯರು ಇದಕ್ಕೆ ಹೆಚ್ಚಿನ ಗಮನ ಕೊಡಬಾರದೆಂದು ಹೇಳುತ್ತೇನೆ. ಮತ್ತೆ ಒಂದು ವಿಚಾರ ಹೇಳಿದರು. ಈ ಮಹಲ್‌ನ್ನು ಅಕ್ವೈರ್ ಮಾಡಿಕೊಳ್ಳ ಬೇಕು ಎನ್ನುವ ಉದ್ದೇಶದಿಂದ ತಂದಿದ್ದಾರೆ ಎಂದು ಹೇಳಿದರು. ಇದನ್ನು ಅಕ್ವೈರ್ ಮಾಡುವುದು ನರಕಾರದ ಗಮನದಲ್ಲಿ ಇದ್ದರೆ ಅನಾವಶ್ಯಕವೆಂದು ನಾನು ಹೇಳುತ್ತೇನೆ. ಆದುದರಿಂದ ಇದು ಪ್ರಿವಿಲೇಜ್ ಮೋಷನ್ ಆಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಆ ಮಹಲ್‌ನ್ನು ಅಕ್ವೈರ್ ಮಾಡುವ ಉದ್ದೇಶ ಇದ್ದರೆ ಅದನ್ನು ತಡೆ ಹಿಡಿಯುವುದು ಒಳ್ಳೆಯದು. ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕ ಕಾಲದಲ್ಲಿ ನಿರ್ದಿಷ್ಟವಾಗಿ ಹೇಳಿದ್ದಾರೆ. ಕಾರ್ಪೊರೇಷನ್‌ನಲ್ಲಿ ರೆಜಲ್ಯೂಷನ್ ಆಗಿಲ್ಲ ಎಂದು. ಪ್ರೊಸೀಡಿಂಗ್ಸ್ ವೆರಿಫೈ ಮಾಡಿಸಬಹುದು. ಇದನ್ನು ಮಂತ್ರಿಗಳು ಉದ್ದೇಶಪೂರ್ವಕವಾಗಿ ಹೇಳಿದ್ದಾರೆ ಎಂದು ನನ್ನ ಭಾವನೆ. ಇಲ್ಲ ಎಂದು ಹೇಳಿದರೆ ಸಭೆಗೆ ಕ್ಷಮೆ ಕೇಳಿದರೆ ಒಳ್ಳೆಯದು. ತಪ್ಪು ದಾರಿಗೆ ಎಳೆಯುವುದನ್ನು ನಾನು ಸಹಿಸುವುದಕ್ಕೆ ಸಾಧ್ಯವಿಲ್ಲ. ಯಾರೇ ಆಗಿರಲಿ ಅನತ್ಯ ನುಡಿಯುವುದು ಸರಿಯಲ್ಲ. ಇದನ್ನು ಚರ್ಚೆ ಮಾಡಬೇಕೆಂದು ನನಗೆ ಹಟಮಾರಿತನ ಇಲ್ಲ. ಮಂತ್ರಿಗಳಿಗಿಂತ

(ಶ್ರೀ ಎಚ್. ಡಿ. ದೇವೇಗೌಡ)

ನಭೆ ದೊಡ್ಡದು. ಮಂತ್ರಿಗಳು ಈ ತರಹ ಹೇಳುವುದು ತಪ್ಪು ಆಗಿದೆ ಎಂದು ಹೇಳಿದರೆ ನನ್ನ ಅಡ್ಡಿ ಇಲ್ಲ. ಈ ವಿಷಯವನ್ನು ನಾನು ಪ್ರೆಸ್ ಮಾಡುವುದಿಲ್ಲ. ಅಧ್ಯಕ್ಷರು ಇದಕ್ಕೆ ಕನ್‌ಸೆಂಟ್ ಕೊಡಬೇಕು.

ಅಧ್ಯಕ್ಷರು.—ಈಗಾಗಲೇ ಕನ್‌ಫ್ಯೂಜ್ ಆಗಿದೆ ಎಂದು ಅವರೇ ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.---ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ ತಾವು ಅವರಿಗೆ ರಕ್ಷಣೆ ಕೊಡುವುದಕ್ಕೆ ಹೋಗಬೇಡಿ. ನಭೆಗಿಂತ ಮಂತ್ರಿಗಳು ದೊಡ್ಡವರು ಅಲ್ಲ. ತಪ್ಪು ಮಾಡುವುದು ದೊಡ್ಡಸ್ಥಿಕೆಯಲ್ಲ. ತಪ್ಪು ಮಾಡಿದ್ದೇನೆ ಎಂದು ಒಪ್ಪಿಕೊಂಡರೆ ಅದು ದೊಡ್ಡಸ್ಥಿಕೆ ಯಾಗುತ್ತದೆ. ಮಂತ್ರಿಗಳನ್ನು ಕೇಳಿ. ಅವರು ಆಗುವುದಿಲ್ಲ ಎಂದರೆ ತಾವು ಇದಕ್ಕೆ ಕನ್‌ಸೆಂಟ್ ಕೊಡಬೇಕೆಂದು ನನ್ನ ಭಾವನೆ.

ಶ್ರೀ ವಾಟಾಳ್ ನಾಗರಾಜ್.—ವಿರೋಧ ಪಕ್ಷದ ನಾಯಕರಾದ ಶ್ರೀ ದೇವೇಗೌಡರು \ಈ ನಭೆಯ ಹಕ್ಕು ಬಾಧ್ಯತೆಗೆ ಚ್ಯುತಿ ತಂದಿದ್ದಾರೆ ಎಂದು ಬೇಗಂ ಮಹಲ್ ವಿಷಯ ತಂದರು. ನಾನು ತಮ್ಮ ಮೂಲಕ ಸರಕಾರದ ಗಮನಕ್ಕೆ ತರುವುದು ಅಲ್ಲ ಟೇಪ್ ರೆಕಾರ್ಡ್ ಇಲ್ಲ.

Sri H. S. SIDDAPPA.—I rise to a point of order. The matter raised by hon. Member Sri Vatal Nagaraj is not relevant to the subject that is before the House.

ಅಧ್ಯಕ್ಷರು.—ಈ ವಿಷಯಕ್ಕೆ ಸಂಬಂಧಪಟ್ಟ ವಿಚಾರ ಇದ್ದರೆ ಮಾತ್ರ ಹೇಳಬಹುದು.

ಶ್ರೀ ವಾಟಾಳ್ ನಾಗರಾಜ್.—ನಾನು ಹೇಗೆ ಮಾತನಾಡಬೇಕೆಂದು ತಾವು ನನಗೆ ಬರೆದುಕೊಡಿ. ನೀವು ಕೋಪಿಸಿಕೊಳ್ಳಬೇಡಿ. ನೀವು ಕೋಪಿಸಿಕೊಂಡರೆ ನಾವು ಸಿಟ್ಟು ಮಾಡುವ ಹಾಗೆ ಇಲ್ಲ. ದೇವೇಗೌಡರು ಹೇಗೆ ಮಾತನಾಡಬೇಕೆಂದು ಹೇಳಿದರು. ನಮ್ಮ ಪಾರ್ಟಿಯವರು ಹೀಗೆ ಮಾತನಾಡಿ ಎಂದು ಹೇಳುತ್ತಾರೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಕಾರ್ಪೊರೇಷನ್ನಿನವರು ಎಂಟು ಗಂಟೆ ಆದಮೇಲೆ ಮೀಟಿಂಗ್ ಮಾಡಿದರು ಎನ್ನುವ ವಿಷಯ ಇಲ್ಲಿ ಎಲ್ಲಿದೆ ?

ಶ್ರೀ ವಾಟಾಳ್ ನಾಗರಾಜ್.—ಅದು ಬೇರೆ ವಿಷಯ. ಇದು 13 ಲಕ್ಷ ರೂಪಾಯಿಗಳ ಪ್ರಕರಣ.

ಅಧ್ಯಕ್ಷರು.—ಸರಕಾರದ ವತಿಯಿಂದ ಈಗಾಗಲೇ ಉತ್ತರ ಹೇಳಿದ್ದಾರೆ. ಈ ನಭೆಯಲ್ಲಿ ವಿಷಾದಪಟ್ಟಿದ್ದೇನೆ ಗೊಂದಲ ಆಯಿತು ಎಂದು ಹೇಳಿದ್ದಾರೆ. ತಾವು ಹಾಗೆ ಹೀಗೆ ಅಂತ ಮಾತನಾಡುವುದು ಸರಿಯಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ಹೇಗೆ ಮಾತನಾಡಬೇಕು ಬರೆಸಿಕೊಡಿ ಅದರಂತೆ ಮಾತನಾಡುತ್ತೇನೆ.

ಅಧ್ಯಕ್ಷರು :—ತಮಗೆ ಹೇಗೆ ಮಾತನಾಡಬೇಕು ಎಂದು ಬರೆದುಕೊಡುವುದಕ್ಕೆ ಆಗುವುದಿಲ್ಲ. ಆ ಕೆಲಸ ನನ್ನದಲ್ಲ.

ಶ್ರೀ ವಾಟಾಳ್ ನಾಗರಾಜ್.—ನಮಗೆ ಅಧಿಕಾರ ಇದೆ, ಏನೂ ಬೇಕಾದರೂ ಮಾಡಿ.

ಅಧ್ಯಕ್ಷರು.—ತಾವು ಸೀಟಿನಲ್ಲಿ ಕುಳಿತುಕೊಂಡು ಹಾಗೆ ಮಾತನಾಡಬಾರದು. ಸರ್ಕಾರದ ಬಗ್ಗೆ ಏನಾದರೂ ವಿಷಯಗಳು ಇದ್ದರೆ ಮಾತನಾಡಿ.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ತಾವು ಇದನ್ನೆರ್ಲಾ ಮಾತನಾಡುವುದಕ್ಕೆ ಮುಂದೆ ಡಿಮ್ಯಾಂಡ್ಸ್ ಬರುತ್ತದೆ. ಆ ಸಂದರ್ಭದಲ್ಲಿ ಇದನ್ನೆರ್ಲಾ ಮಾತನಾಡುವುದಕ್ಕೆ ಬೇಕಾದಷ್ಟು ಅವಕಾಶ ಇದೆ. ಆವಾಗ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್.—ತಮ್ಮ ಹೆಸರು ದುರುಪಯೋಗವಾಗುತ್ತಾಯಿದೆಯರ್ಲಾ ಎಂದು ಹೇಳಿದೆ. ಇದರಲ್ಲಿ ಮೇಯರ್‌ರವರೂ ಸೇರಿದ್ದಾರೆ. ನನ್ನ ಬಾಯಿಯನ್ನು ಮುಚ್ಚಿಸಬೇಡಿ.

ಶ್ರೀ ಡಿ. ದೇವರಾಜ್ ಅರಸ್.—ಕೋಪ ಮಾಡಬೇಡಿ. ಶಾಂತಿಯಿಂದ ಇರಿ.

ಶ್ರೀ ವಾಟಾಳ್ ನಾಗರಾಜ್.—ನಾನು ಈ ವಿಚಾರವನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನಮ್ಮನ್ನು ನಸ್ಪೆನ್‌ಷನ್ ಮಾಡಿದ್ದಾರೆ. ನಮ್ಮನ್ನು ಜನರು ಆರಿಸಿ ಕಳುಹಿಸಿದ್ದರೂ ಕೂಡ ನಾವು ಅಲ್ಲಿ ಹೋಗಿ ಕೂಡುವುದಕ್ಕಾಗುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಮುಂದೆ ಡಿಮ್ಯಾಂಡ್ ಬಂದಾಗ ಆ ಸಂದರ್ಭದಲ್ಲಿ ಈ ವಿಚಾರದ ಬಗ್ಗೆ ಮಾತನಾಡಿ. ಈಗ ನಮಯವಲ್ಲದ ಸಂದರ್ಭದಲ್ಲಿ ಇದನ್ನು ಮಾತನಾಡುವುದು ಬೇಡ ಎಂದು ಅಧ್ಯಕ್ಷರು ಹೇಳಿರುವುದನ್ನು ಪಾಲಿಸೋಣ.

ಶ್ರೀ ಬಿ. ಬಸವಲಿಂಗಪ್ಪ.—ಈಗ ನಾನು ಉತ್ತರ ಕೊಡುವುದು ನಮ್ಮ ಆಫೀಸಿನಿಂದ ಬಂದ ಇನ್‌ಫರ್‌ಮೇಷನ್ ಪ್ರಕಾರ ಹೇಳುತ್ತೇನೆ. ಅದು ಈ ರೀತಿ ಇದೆ :—

> That the proposal to acquire Begum Mahal Building was discussed in the Corporation meeting on Monday and the proposal was dropped''

ಅವರ ವರ್ತಮಾನ ಬಂದಮೇಲೆ ಆ ವಿಷಯವನ್ನು ಬಿಟ್ಟುಬಿಟ್ಟಿದ್ದೇವೆ ಎಂದು ಹೇಳಿದೆ. ಅದುದ ರಿಂದ ಮಾನ್ಯ ಸದಸ್ಯರು ಈರೀತಿ ಒತ್ತಾಯ ಮಾಡಬಾರದು ಎಂದು ಹೇಳುತ್ತೇನೆ.

MADAM SPEAKER.—Now it is dropped. ಈ ರೀತಿ ಇನ್‌ಫರ್ಮೇಷನ್ ಬಂದಿದೆ ಎಂದು ತಿಳಿಸಿದಮೇಲೆ ಅವರು ಸುಳ್ಳು ಹೇಳಬಹುದು ಎನ್ನುವುದರಲ್ಲಿ ಅರ್ಥವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ತಮ್ಮ ಅನುಮತಿ ಪಡೆದು ಮಾತನಾಡುತ್ತೇನೆ. ಈ ಸಭೆ ಯಲ್ಲಿ ಸದಸ್ಯರು ಯಾರಾದರೂ ಈರೀತಿ ಸಾಕಷ್ಟು ಮಾಹಿತಿ ಇಲ್ಲ ಎಂದು ಹೇಳಿದ್ದರೆ ಪರವಾಯಿಲ್ಲ. ಇದು ಹೇಳಿರುವವರು ಜವಾಬ್ದಾರಿಯುತವಾದ ಮಂತ್ರಿಗಳು. ಅವರಲ್ಲೂ ಅಡ್ಜಸ್ಟ್‌ಮೆಷನ್ ಮೆಷಿನರಿ ತಮ್ಮ ಕೈಯಲ್ಲೇ ಇಟ್ಟುಕೊಂಡಿರುವಾಗ ಈ ರೀತಿ ತಪ್ಪು ಉತ್ತರ ಕೊಟ್ಟಿರುವುದು ಸರಿಯಲ್ಲ. ಈ ಕಾರ್ಯಕರಾಪಗಳನ್ನು ನಡೆನತಕ್ಕಂಥಾ ತಾವು ನನಗಿಂತ ಹೆಚ್ಚಿನ ಅನುಭವ ಇರತಕ್ಕಂಥಾವರು. ತಾವು ಇದರ ಬಗ್ಗೆ ನಮಗೆ ರಕ್ಷಣೆ ಕೊಡಬೇಕು. ಮಂತ್ರಿಗಳು ಆ ಸ್ಥಾನದಲ್ಲಿ ಅವರು ದೊಡ್ಡವರು ಇರಬಹುದು, ಆದರೆ ಈ ಸ್ಥಾನದಲ್ಲಿ ಈ ಸಭೆಗೆ ಅವರು ದೊಡ್ಡವರಲ್ಲ.

Sri D. DEVARAJ URS.—May I make a submission? "Hon'ble Minister got the information through the office. As is revealed by him, whether the resolution is passed or not, has itself become a debatable point. ನೀವು ಹೇಳುತ್ತಿದ್ದೀರಿ. ರಾತ್ರಿ ಕಾಲದಲ್ಲಿ ಮೀಟಿಂಗ್ ಕರೆದು ಈರೀತಿ ಪಾಸ್ ಮಾಡಿಸಿಕೊಂಡಿರುವುದು ಸರಿಯೇ ಎಂದು. ಅವರು ಪಾಸ್ ಮಾಡಿಲ್ಲ ಎಂದು ಹೇಳು ತ್ತಿದ್ದಾರೆ. ನೀವು ಪಾಸ್ ಮಾಡಿದ್ದಾರೆ ಎಂದು ಹೇಳಬಹುದು. At the time when we wanted the information, the information given to us was that it was discussed and the resolution was not passed. Subseuently, the Mayor and others say : 'yes, yes, it is passed'. So, amongst the Corporators themselves it is a debatable point whether such a resolution is passed or not. Under these circumstances, as was suggested by the Hon'ble Speaker, this may be dropped.

ಶ್ರೀ ಎಚ್. ಡಿ. ದೇವೇಗೌಡ.—ಶ್ರೀ ಟಿ. ಆರ್. ಶಾಮಣ್ಣ, ಶ್ರೀ ವಾಟಾಳ್ ನಾಗರಾಜ್ ಅವರು ಪಾಸಾಗಿದೆ ಎಂದು ಹೇಳುತ್ತಿದ್ದಾರೆ. ಮಂತ್ರಿಗಳ ಉತ್ತರ ನೋಡಿದರೆ ಸರ್ಕಾರಿ ಅಧಿಕಾರಿಯೊಬ್ಬರು ಆದ ಕಮೀಶನರವರು, ಅಲ್ಲಿ ಕೆಲಸ ಮಾಡುತ್ತಿದ್ದಾರಲ್ಲಾ ಅವರು ಸರ್ಕಾರಕ್ಕೆ ಕಳುಹಿಸಿರತಕ್ಕಂಥಾ ಕಾಲದಲ್ಲಿ ತಪ್ಪು ಉತ್ತರ ಕಳುಹಿಸಿದ್ದಾರೆಯೇ ?

Sri D. DEVARAJ URS.—Whether he has sent an incorrect information or whether it has been otherwise decided is again a debatable point. ಅದು ಕಾರ್ಪೊರೇಷನ್ನಿನಲ್ಲಿ ನಡೆದ ವಿದ್ಯಮಾನಗಳನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿಗೆ. ಈ ಸಭೆಯಲ್ಲಿ ಕಳೆದ 3 ತಿಂಗಳಿಂದಲೂ ನೋಡುತ್ತಾ ಇದ್ದೇವೆ. ಮಂತ್ರಿಗಳು ಹೇಳಿಕೆ ಕೊಡತಕ್ಕಂಥಾ ಕಾಲದಲ್ಲಿ ಹೇಗಾದರೂ ಆಗಲಿ ಒಂದು ಮಾರು ಹೆಚ್ಚು ಕಡಿಮೆ ಉತ್ತರ ಕೊಟ್ಟರೆ ಆಯಿತು ಎಂದು ತಿಳಿದು

(ಶ್ರೀ ಹೆಚ್. ಡಿ. ದೇವೇಗೌಡ)

ಕೊಂಡಿದ್ದಾರೆ. ಈ ತರಹ ಹಲವಾರು ಇನ್‌ಕರೆಕ್ಟ್ ಸ್ಟೇಟ್‌ಮೆಂಟ್ ಮಾಡಿರುವ ಇನ್‌ಸ್ಟೆನ್ಸ್‌ಗಳು ಇವೆ. ಇದರ ಬಗ್ಗೆ ಡಿಮ್ಯಾಂಡ್ ಮೇಲೆ ಜನರಲ್ ಡಿಸ್ಕಷನ್ ಆಗುವಾಗ ಮಾತನಾಡುವುದಕ್ಕೆ ತಯಾರಾಗಿದ್ದೇನೆ. ಆದರೆ ಈ ಸಭೆಯ ಕಾರ್ಯಕಲಾಪಗಳಿಗೆ ಧಕ್ಕೆ ತರುವುದಾಗಲಿ, ಚ್ಯುತಿ ತರುವುದಾಗಲಿ ನಹಿನತಕ್ಕಂಥಾದ್ದು ಸಾಧ್ಯವಿಲ್ಲ. ಮಂತ್ರಿಗಳದ್ದು ತಪ್ಪಿಲ್ಲದಿದ್ದರೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ. ಡಿಬೇಚೆಬರ್ ಪಾಯಿಂಟ್ ಎಂದು ರೆನಲ್ಯೂಷನ್ ಆಗಿರತಕ್ಕಂಥ ಬಗ್ಗೆ ಯಾರಾದರೂ ಆಗಲಿ ಮಂತ್ರಿಗಳಿಗೆ ತಪ್ಪು ಅಭಿಪ್ರಾಯಗಳನ್ನು ಕಳುಹಿಸಿಕೊಟ್ಟಂಥ ಅಧಿಕಾರಿಗಳನ್ನು ಶಿಕ್ಷೆ ಮಾಡಿ.

Sri D. DEVARAJ URS.—We will get it examined.

Sri H. D. DEVEGOWDA.—Till then let the matter be held-over.

Sri D. DEVARAJ URS.—It is the Minister's responsibility. He will examine whether the information given to him is right or not. We take the responsibility for whatever is said here. The Hon'ble Minister told the House about the information he received on that day. And subsequently if it is proved otherwise, I stand corrected.

ಶ್ರೀ ಎಚ್. ಡಿ. ದೇವೇಗೌಡ.—ಅಧಿಕಾರಿಗಳು ತಪ್ಪು ತಿಳುವಳಿಕೆ ಕೊಟ್ಟಿದ್ದಾರೆಯೇ ತಿಳಿಸಬೇಕು. ಅಥವಾ ಸಂಬಂಧಪಟ್ಟ ಮಂತ್ರಿಗಳು ತಪ್ಪು ಹೇಳಿದ್ದರೆ ಈ ಸಭೆಯಲ್ಲಿ ಅವರು ಕ್ಷಮೆ ಕೇಳಬೇಕಾಗುತ್ತದೆ. ಮಂತ್ರಿಗಳ ಸ್ಟೇಟ್‌ಮೆಂಟ್‌ನಲ್ಲಿ "It is none of my concern" ಎಂದು ಹೇಳಿದರೆ ಏನು ಅರ್ಥ! ಮಂತ್ರಿಗಳು ಈ ಸಭೆಯಲ್ಲಿ ತಪ್ಪು ಉತ್ತರ ಕೊಟ್ಟಿದ್ದೇವೆ ಎಂದು ಒಪ್ಪಿಕೊಳ್ಳಿ. ಅದರಿಂದ ಅವರ ದೊಡ್ಡಸ್ಥಿಕೆ ಏನೂ ಕಡಿಮೆಯಾಗುವುದಿಲ್ಲ.

2-30 P.M.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಅಧ್ಯಕ್ಷರೇ, ಹಿಂದೆ ರಾಮಪ್ರಿಯ ಕಟ್ಟಡವನ್ನು ಕೊಂಡುಕೊಳ್ಳಬೇಕೆಂದು ಹಿಂದೆ ಕಾಂಗ್ರೆಸ್ ಪಕ್ಷದವರು ಇದ್ದ ಸಂದರ್ಭದಲ್ಲಿ ನಾವು ಆ ಕಡೆ ಇದ್ದೆವು. ಆಗ ಬಂದಂಥ ಕಹಿ ವಾತಾವರಣ ಏನು ಎನ್ನುವುದನ್ನು ನನ್ನ ಸ್ಮರಣೆಗೆ ಈಗ ಸಭೆಯ ಮುಂದಿರುವ ವಿಷಯ ತಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯದಲ್ಲಿ ಉತ್ತರ ಕೊಟ್ಟುದನ್ನು ಕೇಳಿದೆ. ಅವರು ಆ ದಿನ ಸಭೆಯಲ್ಲಿ ಇರಲಿಲ್ಲ. ಆ ದಿನ ನಡೆದುದನ್ನು ಮತ್ತು ಈ ದಿನ ನಡೆಯುತ್ತಿರುವುದನ್ನೂ ನೋಡಿದರೆ ರಾಮಪ್ರಿಯ ಪ್ರಕರಣ ಇದರಲ್ಲಿಯೂ ಆಗುತ್ತದೆಯೋ ಏನೋ ಎನ್ನುವ ಶಂಕೆ ಬರುತ್ತಿದೆ. ಬೇಗಮ್ ಮಹಲ್ ಕಟ್ಟಡವನ್ನು ಕೊಂಡುಕೊಳ್ಳಬೇಕೆಂದು ನಿರ್ಣಯವಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದಾಗ, ಆ ವಿಚಾರದಲ್ಲಿ ಚರ್ಚೆ ನಡೆದು ಅದನ್ನು ಅಲ್ಲಿಗೇ ಕೈ ಬಿಟ್ಟರು ಎಂದು ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರು. ಫೈನಾನ್ಸ್ ಕಮಿಟಿಯಲ್ಲಿ ಬಿದ್ದು ಹೋಯಿತು ಎಂದು ಕೇಳಿದರು; ಮಾನ್ಯ ಮೇಯರ್ ಅವರು ಸಾರ್ವಜನಿಕ ಹಿತದೃಷ್ಟಿಯಿಂದ ಇದು ಬೇಕು ಎಂದು ಹೇಳಿದರು ಮತ್ತೆ ರೀಕನ್‌ಸಿಡರೇಷನ್ನಿಗೆ ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ ಎಂದು ಹೇಳಿದರು. ಈ ಮೂರೂ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರವನ್ನು ನಾವು ಗಮನಿಸಬೇಕಾಗಿದೆ. ಒಂದು ವೇಳೆ ಕಾರ್ಪೊರೇಷನ್ ಬೇಕು ಎನ್ನುವುದು, ಸರ್ಕಾರದವರು ಬೇಡ ಎನ್ನುವುದು ಎಂಬ ವಿಚಾರ ಇದರಲ್ಲಿ ಉದ್ಭವವಾಗುತ್ತದೆ. ಅವರು ಬೇಕು ಎಂದು ರೆಸಲ್ಯೂಷನ್ ಮಾಡುವುದು, ಸರ್ಕಾರದವರು ಬೇಡ ಎಂದು ತೀರ್ಮಾನ ಮಾಡುವುದು. ಇದು ಕ್ಯಾಬಿನೆಟ್ ಸಬ್ಜೆಕ್ಟೋ ಅಥವಾ ಮಂತ್ರಿಗಳ ಸಬ್ಜೆಕ್ಟೋ ಗೊತ್ತಿಲ್ಲ. ಒಂದು ವಿಚಾರವೇನೆಂದರೆ ರಾಮಪ್ರಿಯ ಪ್ರಕರಣ ಆಗುವುದು ಬೇಡ, ಸರ್ಕಾರದವರು ಕೂಲಂಕಷವಾಗಿ ನೋಡಬೇಕು.

ಐದಾರು ಲಕ್ಷ ರೂಪಾಯಿ ಬೆಲೆ ಬಾಳತಕ್ಕದ್ದಕ್ಕೆ 13 ಲಕ್ಷ ಕೊಡಲು ತೀರ್ಮಾನ ಮಾಡಿದ್ದಾರೆ ಎನ್ನುವ ಪ್ರಕರಣ ಉದ್ಭವವಾಗುವ ರೀತಿಯನ್ನು ತೋರಿಸುತ್ತದೆ. ನನಗೆ 'ಖಚಿತವಾಗಿ ಬಂದಿರುವ ವರ್ತಮಾನದ ಪ್ರಕಾರ' ಎಂಬುದಾಗಿ ಸರ್ಕಾರದವರು ಹೇಳುವಾಗ ವರ್ತಮಾನ ಎಂದರೆ ಒಂದು ಮೆಸೇಜ್ ಬಂತೇ ಅಥವಾ ಒಂದು ಪತ್ರ ಬಂತೇ ಯಾವ ರೀತಿ ವರ್ತಮಾನ ಬಂತು ಎನ್ನುವುದನ್ನು ನಮಂಜಸವಾಗಿ ಹೇಳಲಿಲ್ಲ. ನನಗೆ ಬಂದ ವರ್ತಮಾನ ಎಂದರೆ ಸಿ. ಐ. ಡಿ. ರಿಪೋರ್ಟ್ ಆದರೂ

ಆಗಬಹುದು, ರಿಕಾರ್ಡ್ ಆದರೂ ಆಗಬಹುದು. ಆದುದರಿಂದ ಸದಸ್ಯರ ಮನಸ್ಸಿಗೆ ನೆಮ್ಮದಿ ಬರುವ ಹಾಗೆ, ಕೋಜೆಂಟ್ ಆಗಿ ವಿಷಯಗಳನ್ನು ತಿಳಿಸಿ, ಇದರ ಬಗ್ಗೆ ಸರ್ಕಾರದವರು ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

Sri T. R. SHAMANNA.—To cut short the debate, I will say something.

Sri D. DEVARAJ URS.—I have no objection if this is held over. Whether the information Sri Deve Gowda has got is the correct information, is a point for us to consider. It is only then the question arises whether the Minister has given an incorrect information or the correct information. So, I do not mind if the question is held over.

Sri H. D. DEVE GOWDA.—I have produced a certified copy of the resolution.

Sri D. DEVARAJ URS.—I submit whether the resolution has been passed or not is itself a debatable point. Therefore the question may be held over.

MADAM SPEAKER.—I hold over this question.

Extension of time for Receipt of applications at the Medical Colleges.

Sri H. S. SIDDAPPA (Arsikere).—I had given notice of a calling attention to darw the attention of the Government to an urgent public matter with regard to the admission of students in the Medical Colleges. If no immediate action is taken, thousands of students who are seeking admission will be put to a lot of inconvenience. The admission to Medical Colleges has been fixed as 30th June 1972 as the last date for receipt of applications. The University authorities have not yet issued the marks cards to the students. Besides, some of the Revenue Officers who are to issue income certificates are busy in attending the marriages. I would therefore request the Government, in the interests of students who are seeking admission to the Medical Colleges, to postpone the last date fixed for receipt of applications. Practically 30th June is fast approaching and within these two days the students cannot submit their applications, with marks cards and income certificates. Because of the peculiar situation in which the students are placed, I request the Government to extend the time limit for receipt of applications.

Sri H. SIDDAVEERAPPA (Minister for Health).—There is no difficulty in extending the time. We can give them 10 days time if it is sufficient.

Non-availability of the Application forms for Recruitment

† ಶ್ರೀ ಜೆ. ಎಲ್. ಕಬಾಡಿ (ಬಳ್ಳೊಳ್ಳಿ).—ರಿಕ್ರೂಟ್‌ಮೆಂಟ್ ಕಮಿಟಿ ಚೇರ್‌ಮನ್ ಅವರು ವಿದ್ಯಾ ಇಲಾಖೆ ಮತ್ತು ಆರೋಗ್ಯ ಇಲಾಖೆಗೆ ಮೂರನೇ ದರ್ಜೆ ಹುದ್ದೆಗಳಿಗೆ ಅರ್ಜಿಗಳನ್ನು ಕರೆದರು. 25 ನೇ ತಾರೀಖಿನ ಒಳಗಾಗಿ ರಿಕ್ರೂಟ್‌ಮೆಂಟ್ ಕಮಿಟಿ ಫಾರಂ 1 ರಲ್ಲಿ ಕಳುಹಿಸಿ